# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ


ರವರ ಕಛೇರಿ
(CIN) : U40109KA2004SGC035177
ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ನಿಗಮ ಕಛೇರಿ : ನಂ. 29, ವಿಜಯನಗರ,
ಕಾರ್ಯ ಮತ್ತು ಪಾಲನೆ ಉಪ-ವಿಭಾಗ,
2ನೇ ಹಂತ, ಹಿನಕಲ್
ಸೆಸ್ಕ್, ಬೇಲೂರು.
ಮೈಸೂರು-570 017
ದೂ.ಸಂ. 08177-222223
www.cescmysore.org
E.Mail : aeehsnbelur@rediffmail.com


ಕ್ರಮಾಂಕ : ಸ.ಕಾ.ಇಂ(ವಿ)/ಸ.ಇಂ(ತಾಂ)/ಬೇ/2017-18/F-16/ 559, 60 ದಿನಾಂಕ : 14.6.17

## ಜನಸಂಪರ್ಕ ಸಭೆಯ ನಡವಳಿಗಳು

ದಿನಾಂಕ : 27.05.17 ರ ಶನಿವಾರದಂದು ಮಾನ್ಯ ಸುಚೇತನ್, ಅಧೀಕ್ಷಕ ಇಂಜಿನಿಯರ್(ವಿ), ಹಾಸನ ರವರ ಅಧ್ಯಕ್ಷತೆಯಲ್ಲಿ ಬೇಲೂರು ಉಪವಿಭಾಗ ಕಛೇರಿಯಲ್ಲಿ ನಡೆಸಿದ ಜನಸಂಪರ್ಕ ಸಭೆಯ ನಡವಳಿಗಳು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ;**

1. ಶ್ರೀ ನಾರಾಯಣ ಬೋವಿ, ಕಾ. ಇಂ(ವಿ), ಸಕಲೇಶಪುರ ವಿಭಾಗ.
2. ಶ್ರೀ ಹರೀಶ್, ಲೆಕ್ಕಾಧಿಕಾರಿ, ಸಕಲೇಶಪುರ ವಿಭಾಗ.
3. ಶ್ರೀ ತೋಟಪ್ಪ, ಲೆಕ್ಕಾಧಿಕಾರಿ(ಆಂ.ಪ), ಸಕಲೇಶಪುರ ವಿಭಾಗ.
4. ಶ್ರೀಮತಿ ಕವಿತಾ ಹೆಚ್. ಆರ್, ಸ.ಕಾ.ಇಂ(ವಿ), ಬೇಲೂರು ಉಪವಿಭಾಗ.
5. ಶ್ರೀ ಮಹದೇವ್ ಕೆ. ಕೆ., ಸಹಾಯಕ ಇಂಜಿನಿಯರ್(ವಿ), ಬೇಲೂರು ನಗರ ಶಾಖೆ.
6. ಶ್ರೀ ಬಿ. ಜೆ. ರಾಘವೇಂದ್ರ, ಪ್ರಭಾರಿ ಸ. ಇಂ, ತಾಂತ್ರಿಕ, ಬೇಲೂರು ಉಪವಿಭಾಗ.
7. ಶ್ರೀ ಚಿಕ್ಕವರದಯ್ಯ, ಕಿರಿಯ ಇಂಜಿನಿಯರ್(ವಿ), ಹಳೇಬೀಡು ಶಾಖೆ.
8. ಶ್ರೀ ಡಿ. ಸಂತೋಷ್ ಕುಮಾರ್, ಕಿರಿಯ ಇಂಜಿನಿಯರ್(ವಿ), ಹಗರೆ ಶಾಖೆ.
9. ಶ್ರೀ ಜಿ. ಶಶಿಕಿರಣ್, ಕಿರಿಯ ಇಂಜಿನಿಯರ್(ವಿ), ತೊಳಲು ಶಾಖೆ.
10. ಶ್ರೀ ಎಂ. ರೇವಣ್ಣ, ಕಿರಿಯ ಇಂಜಿನಿಯರ್(ವಿ), ಅರೇಹಳ್ಳಿ ಶಾಖೆ.
11. ಶ್ರೀ ಎನ್. ಎಂ. ಗುರುಪ್ರಸಾದ್, ಹಿರಿಯ ಸಹಾಯಕರು, ಕಂದಾಯ ಶಾಖೆ, ಬೇಲೂರು.

ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ಸ್ವಾಗತಿಸುವ ಮೂಲಕ ಸಭೆಯನ್ನು ಬೆಳಿಗ್ಗೆ **11 : 00** ಘಂಟೆಗೆ ಪ್ರಾರಂಭ ಮಾಡಿದರು.

---

**ಜನಸಂಪರ್ಕ ಸಭೆಯಲ್ಲಿ ದಾಖಿಲಾದ ದೂರಿನ ವಿವರಗಳು ಈ ಕೆಳಕಂಡಂತೆ ಇರುತ್ತದೆ ;**

1. ಶ್ರೀ ಭದ್ರೇಗೌಡ, ಕಳ್ಳೇರಿ ಗ್ರಾಮ ಪಂಚಾಯತಿ ಸದಸ್ಯರು ತಮ್ಮ ತೋಟದ ಲೈನ್‌ನ ಸಮೀಪದಲ್ಲಿರುವ ಮರಗಿಡಗಳನ್ನು ಕಡಿಯುವಂತೆ ತುಂಬಾ ಸರಿ ತೊಳಲು ಶಾಖಾಧಿಕಾರಿಯವರಿಗೆ ತಿಳಿಸಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ದೂರನ್ನು ನೀಡಿದರು.

   ಸಭೆಯ ಅಧ್ಯಕ್ಷರು ಬೇಲೂರು ಉಪವಿಭಾಗದಲ್ಲಿ 39 ಕಿರಿಯ ಮಾರ್ಗದಾಳುಗಳು ನೇಮಕಗೊಂಡಿದ್ದು, ಸದರಿಯವರಿಂದ ಸಂಬಂಧಿಸಿದ ಶಾಖೆಯಲ್ಲಿ ಜಂಗಲ್ ಕ್ಲಿಯರ್ ಮಾಡಿಸಲಾಗುವುದು ಎಂದು ತಿಳಿಸಿದರು.
2. ಶ್ರೀ ಸುಂದರೇಶ್, ಕಣತೂರು ರವರು ಚಂದ್ರೇಗೌಡ ರವರ ಮನೆಯ ಹತ್ತಿರ ಕಂಬದಿಂದ ಕಂಬಕ್ಕೆ ವಾಹಕವನ್ನು ಎಳೆದಿರುವ ಅಂತರ ತುಂಬಾ ಇದ್ದು, ಇದರಿಂದಾಗಿ ಪದೇ ಪದೇ ವೈರ್ ಟ್ವಿಸ್ಟ್ ಆಗುತ್ತಿರುತ್ತದೆ ಎಂದು ತಿಳಿಸಿ ದೂರು ನೀಡಿರುತ್ತಾರೆ.

   ಸಭೆಯ ಅಧ್ಯಕ್ಷರು ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ) ಹಾಗೂ ತೊಳಲು ಶಾಖಾಧಿಕಾರಿ ಗಳಿಗೆ ಸ್ಥಳ ಪರಿಶೀಲಿಸಿ ಕ್ರಮ ಕೈಗೊಳ್ಳಲು ಸೂಚಿಸಿರುತ್ತಾರೆ.
3. ಶ್ರೀ ಸ್ವಾಮಿ ಗೌಡ, ರೈತ ಸಂಘ, ಬಿಳ್ಳೂರು ರವರು ಒಬ್ಬ ಮನುಷ್ಯ ಮೃತಹೊಂದಿ ಒಂದೂವರೆ ವರ್ಷವಾದರೂ ತಮ್ಮ ನಿಗಮದಿಂದ ಇನ್ನೂ ಪರಿಹಾರ ನೀಡಿರುವುದಿಲ್ಲ ಮತ್ತು ಕಂಬಗಳು ಜಗ್ಗಿದ್ದು ಲೈನನ್ನು ಸರಿಪಡಿಸಿರುವುದಿಲ್ಲ ಎಂದು

-2-

ದೂರು ಸಲ್ಲಿಸಿ, ಇನ್ನು ಮುಂದೆ ಜನಸಂಪರ್ಕ ಸಭೆಯನ್ನು ಆಯೋಜಿಸುವ ಸಮಯದಲ್ಲಿ ಎಲ್ಲರಿಗೂ ತಿಳಿಯುವ ಹಾಗೆ ಕರಪತ್ರವನ್ನು ಎಲ್ಲಾ ಹಳ್ಳಿಗಳಿಗೂ ಹಂಚಬೇಕು ಎಂಬ ಸಲಹೆಯನ್ನು ಸಹಾ ನೀಡಿದರು.

ಶ್ರೀ ಯಜಮಾನೇಗೌಡ, ಬಳ್ಳೂರು ಇವರು ಈ ಹಿಂದೆ ವಿದ್ಯುತ್ ಅಪಘಾತದಿಂದ ಮೃತ ಹೊಂದಿದ್ದು, ಇದಕ್ಕೆ ನಿಗಮದಿಂದ ನೀಡಲಾಗುವ ಪರಿಹಾರ ಮೊತ್ತವನ್ನು ಸಭೆಯ ಅಧ್ಯಕ್ಷರ ಉಪಸ್ಥಿತಿಯಲ್ಲಿ ಮೃತರ ಪತ್ನಿಯವರಾದ ಶ್ರೀಮತಿ ಕಾತ್ಯಾಯಿನಿಯವರಿಗೆ ಚೆಕ್ ಮುಖಾಂತರ ನೀಡಲಾಗಿರುತ್ತದೆ.

ಇನ್ನು ಮುಂದೆ ನಡೆಸಲಾಗುವ ಜನಸಂಪರ್ಕ ಸಭೆಗೆ ಮುನ್ನ ಕರಪತ್ರವನ್ನು ಹಂಚುವ ಬಗ್ಗೆ ಮೇಲಾಧಿಕಾರಿಗಳ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

4. ಶ್ರೀ ಹರೀಶ್, ಹಳೇಬೀಡು ರವರು ಕ್ಯಾತನಕೆರೆ ಎನ್.ಜೆ.ವೈ. ಫೀಡರ್ ನ ಎ.ಬಿ. ಕೇಬಲ್ ಸುಟ್ಟುಹೋಗಿದ್ದು ಈ ಫೀಡರ್‌ನ ಸಂಪರ್ಕಿತ ಭಾರವನ್ನು ಪಕ್ಕದಲ್ಲೇ ಹಾದು ಹೋಗಿರುವ ಹಳೇಬೀಡು ಟೌನ್ ಫೀಡರ್ ಮೇಲೆ ಸುಮಾರು 6 ತಿಂಗಳಿನಿಂದ ಹಾಕಲಾಗಿದ್ದು, ಎನ್.ಜೆ.ವೈ. ಫೀಡರ್ ಲೈನ್ ಟ್ರಬಲ್ ತುಂಬಾ ಇದ್ದು ಇದರಿಂದಾಗಿ ಹಳೇಬೀಡು ಟೌನ್ ಗ್ರಾಹಕರಿಗೆ ವಿದ್ಯುತ್ ಸರಬರಾಜಿನಲ್ಲಿ ತುಂಬಾ ವ್ಯತ್ಯಯವಾಗಿರುತ್ತದೆ ಎಂದು ದೂರಿರುತ್ತಾರೆ.

ಈ ಬಗ್ಗೆ ಸಭೆಯ ಅಧ್ಯಕ್ಷರು ಉಪವಿಭಾಗ ಅಧಿಕಾರಿಗಳು ಹಾಗೂ ಶಾಖಾಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವಿಚಾರಿಸಿದಾಗ ಉಪವಿಭಾಗಾಧಿಕಾರಿಗಳು ಎ.ಬಿ. ಕೇಬಲ್ ಅನ್ನು ಬದಲಾವಣೆ ಮಾಡಿ ಹೊಸ ಓವರ್ ಹೆಡ್ ಮಾರ್ಗವನ್ನು ಅಳವಡಿಸಲು ಅಂದಾಜು ಪಟ್ಟಿಯನ್ನು ಸಿದ್ಧಪಡಿಸಿ ವಿಭಾಗೀಯ ಕಛೇರಿಗೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

5. ಶ್ರೀ ಮಂಜುನಾಥ ಶೆಟ್ಟಿ, ಪತ್ರಕರ್ತರ ಸಂಘದ ಅಧ್ಯಕ್ಷರು, ಬೇಲೂರು ರವರು ಮಾತನಾಡಿ ಬೇಲೂರು ಟೌನ್ ನಲ್ಲಿರುವ ಪವನ್ ಕಾಂಪ್ಲೆಕ್ಸ್ ಹಿಂಭಾಗದಲ್ಲಿ ಹಾಗೂ ಮೀನುಗಾರಿಕೆ ಇಲಾಖೆಯ ಪಕ್ಕದಲ್ಲಿ ಕಂಬ ಬಾಗಿರುವುದನ್ನು ಆದಷ್ಟು ಬೇಗ ಸರಿಪಡಿಸಬೇಕಾಗಿ ಮತ್ತು ಕೆರೆಬೀದಿಯಲ್ಲಿರುವ ಕಬ್ಬಿಣದ ಕಂಬವನ್ನು ಬದಲಾಯಿಸುವಂತೆ ವಿನಂತಿಸಿದರು.

ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

6. ಶ್ರೀ ರವೀಶ್, ಪ್ರಜಾವಾಣಿ ಪತ್ರಿಕೆಯ ಪತ್ರಕರ್ತರು ರವರು ಬೇಲೂರು ಟೌನ್‌ನ ಗಾಣಿಗರ ಬೀದಿಯಲ್ಲಿ ತುಂಬಾ ವರ್ಷಗಳಿಂದ ಕಬ್ಬಿಣದ ಕಂಬವಿದ್ದು ಅದನ್ನು ಬದಲಾಯಿಸುವಂತೆ ಕೋರಿದರು.

ಸಭೆಯ ಅಧ್ಯಕ್ಷರು ಬೇಲೂರು ಶಾಖಾಧಿಕಾರಿಗಳಿಗೆ ಆದಷ್ಟು ಬೇಗ ಕ್ರಮ ಕೈಗೊಳ್ಳುವಂತೆ ಸೂಚಿಸಿದರು.

7. ಶ್ರೀ ಚಂದ್ರಶೇಖರ್, ಯರೇಹಳ್ಳಿ ರವರು ಕರಗಡ ಗ್ರಾಮದ ಸರ್ವೆ ನಂ. 124/1 ರಲ್ಲಿ ಹೊಸದಾಗಿ ಕೊಳವೆ ಬಾವಿ ಕೊರೆಸಿದ್ದು, ಉಪವಿಭಾಗದವತಿಯಿಂದ ಆರ್. ಆರ್. ನಂಬರನ್ನು ಪಡೆದಿದ್ದು, ಆದರೆ ಸ್ಥಳದಲ್ಲಿ ಅಕ್ಕಪಕ್ಕದ ಗ್ರಾಹಕರು ಹಾಲಿ ಇರುವ ಪರಿವರ್ತಕದಿಂದ ವಿದ್ಯುತ್ ಸಂಪರ್ಕವನ್ನು ಪಡೆದುಕೊಳ್ಳಲು ತೊಂದರೆಯನ್ನು ನೀಡುತ್ತಿರುತ್ತಾರೆ, ಆದ್ದರಿಂದ ತಾವುಗಳು ಸ್ಥಳಕ್ಕೆ ಆಗಮಿಸಿ ನನಗೆ ಸೇರಿದ ಕೊಳವೆ ಬಾವಿಗೆ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಬೇಕೆಂದು ಕೋರಿರುತ್ತಾರೆ.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ಸಭೆಯನ್ನು ಉದ್ದೇಶಿಸಿ ಸಭೆಗೆ ಆಗಮಿಸಿದ್ದ ಗ್ರಾಹಕರಿಗೆ ತಮ್ಮ ವ್ಯಾಪ್ತಿಯಲ್ಲಿರುವ ಅನಧಿಕೃತ ಐ.ಪಿ. ಸ್ಥಾವರಗಳನ್ನು ಸಕ್ರಮಗೊಳಿಸುವಂತೆ ಪ್ರೇರೇಪಿಸಬೇಕೆಂದು ತಿಳಿಸಿದರು.

ಶ್ರೀ ಕುಮಾರ್, ಬೇಲೂರು ರವರು ಬೇಲೂರು ಉಪವಿಭಾಗದಲ್ಲಿರುವ ಸಿಬ್ಬಂದಿಗಳು ಒಂದೇ ಸ್ಥಳದಲ್ಲಿ ತುಂಬಾ ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿದ್ದು, ಅವರುಗಳ ಸ್ಥಳ ಬದಲಾವಣೆ ಮಾಡಬೇಕೆಂದು ಅಧ್ಯಕ್ಷರನ್ನು ಆಗ್ರಹಿಸಿದರು.

ಸಭೆಯ ಅಧ್ಯಕ್ಷರು ತುಂಬಾ ವರ್ಷಗಳಿಂದ ಒಂದೇ ಸ್ಥಳದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಲೈನ್ ಮನ್‌ಗಳ ಸ್ಥಳ ಬದಲಾವಣೆ ಮಾಡಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು ಮತ್ತು ಲೈನ್ ಮನ್‌ಗಳು ಸಂಬಂಧಪಟ್ಟ ಕ್ಯಾಂಪ್‌ಗಳಲ್ಲಿ ವಾಸವಾಗಿರಬೇಕು ಎಂದು ಮೌಖಿಕವಾಗಿ ಕಾರ್ಯ ನಿರ್ವಾಹಕ ಇಂಜಿನಿಯರ್ ರವರಿಗೆ ತಿಳಿಸಿದರು.

**ಶ್ರೀಯುತರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರುಗಳನ್ನು ವಂದಿಸುವ ಮೂಲಕ ಸಭೆಯನ್ನು ಮಧ್ಯಾಹ್ನ 2 : 30 ಕ್ಕೆ ಮುಕ್ತಾಯಗೊಳಿಸಲಾಯಿತು.**

ಸಹಾಯಕ ಕಾರ್ಯಪಾಲಕ ಇಂಜಿನಿಯರ್(ವಿ)
ಕಾ ಮತ್ತು ಪಾ ಉಪ-ವಿಭಾಗ, ಸೆಸ್ಕ್, ಬೇಲೂರು.

*ಯಥಾ ಪ್ರತಿಗಳನ್ನು ;*

1. ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಚಾ.ವಿ.ಸ.ನಿ.ನಿ., ಹಾಸನ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಸಕಲೇಶಪುರ ರವರ ಆದ್ಯ ಗಮನಕ್ಕೆ ಸಲ್ಲಿಸಿದೆ.
3. ಕಛೇರಿ ಪ್ರತಿ.